

ಹಂಸಗೀತೆ: ಸಹೃದಯನ ನಿರಂತರ ಹಿಂಬಾಲಿಸುವ 'ಮೌನ'ಕಾವ್ಯ

ಸುಬ್ಬರಾವ್, ಎಲ್ಲರೂ ಗೌರವಿಸುವ ತ.ರಾ.ಸು. ಅವರ ಅದೇ ಹೆಸರಿನ ಕಾದಂಬರಿಯನ್ನು ಆಧರಿಸಿದ ಚಿತ್ರ. ಈ ಚಿತ್ರದ ಕಥೆ, ಭೈರವಿ ರಾಗವನ್ನು ಆರಾಧಿಸಿ, ಅದರ ಮೇಲೆ ಪ್ರಭುತ್ವ ಸಾಧಿಸಿದ ಭೈರವಿ ವೆಂಕಟಸುಬ್ಬಯ್ಯ ಎಂಬ ಸಂಗೀತಗಾರನ ಬದುಕಿನ ವಿವಿಧ ರಾಗ–ಭಾವಗಳನ್ನು ಆಧರಿಸಿದ್ದು. ಹೈದರಾಲಿ–ಟಿಪ್ಪು ಸುಲ್ತಾನ್, ಮದಕರಿ ನಾಯಕ ಪಾಳೇಗಾರರ ಚಿತ್ರದುರ್ಗದ ಕೋಟೆಯನ್ನು ಕೈವಶ ಮಾಡಿಕೊಳ್ಳುವ ಮೊದಲಿನ ಕಾಲದ ಕಥೆ; 'ಸಂಗೀತ ಯಾರ ಜಪ್ತಿಗೂ ಸಿಗದ ನವಿಲು' ಎಂಬುದನ್ನು ಟಿಪ್ಪುವಿಗೆ ಮನವರಿಕೆ ಮಾಡಿಕೊಡುವ ವೆಂಕಟಸುಬ್ಬಯ್ಯನ ಕಥೆ.

ಈ ಕಾದಂಬರಿ ಪ್ರಕಟವಾದದ್ದು 1952ರಲ್ಲಿ. ಈ ಚಿತ್ರವನ್ನು ನಿರ್ದೇಶಿಸಿದವರು 'ಬರಿಗಾಲ' ನಿರ್ದೇಶಕ ಎಂದೇ ಖ್ಯಾತರಾದ ಜಿ.ವಿ. ಅಯ್ಯರ್. (ಅವರು ಚಪ್ಪಲಿ ಧರಿಸದೆ, ಬರಿಗಾಲಲ್ಲಿ ಚಿತ್ರ ನಿರ್ದೇಶಿಸುತ್ತಿದ್ದುದರಿಂದ ಅವರಿಗೆ 'ಬರಿಗಾಲ ಚಿತ್ರ ನಿರ್ದೇಶಕ' ಎಂಬ ಹೆಸರು ಬಂತು). ಈ ಅಯ್ಯರ್ ಹಲವು ಕಾರಣಗಳಿಗಾಗಿ ಭಾರತೀಯ ಚಿತ್ರರಂಗದ ಶ್ರೇಷ್ಠ ನಿರ್ದೇಶಕರಲ್ಲಿ ಒಬ್ಬರು. ಅನುಭವ ದ್ರವ್ಯವೇ ಆಧಾರವಾದ, ಬದಲಾವಣೆ–ಸಿದ್ಧ ಚೌಕಟ್ಟಿನಿಂದಾಚೆಗೆ ಜಿಗಿವ ತವಕ ಅಯ್ಯರ್ ವೈಶಿಷ್ಟ್ಯ. ಸತ್ಯಾನ್ವೇಷಣೆಯನ್ನೇ ಮರೆತ ಒಂದು ಕರಾಳ ಪರಿಸರದಲ್ಲಿ ಸೌಂದರ್ಯ ಮತ್ತು ನಿಗೂಢತೆಯ ಬಗ್ಗೆ ಎಚ್ಚರವಾಗಿದ್ದೂ, ಕಲೆಗೆ ಚ್ಯುತಿ ಬಾರದ ಹಾಗೆ ಚಿತ್ರಶಿಲ್ಪವನ್ನು ಕಟ್ಟಿಕೊಟ್ಟ ಕುಶಲಿ ಅಯ್ಯರ್. ಅವರ ಕುರಿತು ಇತರ ಹಲವಾರು ಟೀಕೆಗಳಿದ್ದರೂ, ಹಲವಾರು ಆಕ್ಷೇಪಗಳಿದ್ದರೂ, ಅಯ್ಯರ್ ಅವರ ಸೌಂದರ್ಯ–ಸೂಕ್ಷ್ಮಜ್ಞತೆ ಬಗ್ಗೆ ಇದ್ದ ಪ್ರೀತಿ, ಬದ್ಧತೆ ಬಗ್ಗೆ ಯಾರದೂ ಅಪಸ್ವರವಿಲ್ಲ. ವಿಶ್ವದ ನಡೆ, ದೊಡ್ಡವರ ಮಾತುಗಳನ್ನು ಪುನರ್ ಮೌಲ್ಯಮಾಪನಕ್ಕೆ, ವಿಚಾರದ ನಿಕಷಕ್ಕೆ ಒಡ್ಡಿದವರು ಅಯ್ಯರ್.

ಅಯ್ಯರ್ ಅವರ ಆಲೋಚನೆಯ ಹೊಳಹುಗಳು ಸ್ಪಷ್ಟವಾಗಿ ಗೋಚರಿಸಿದ್ದು, ಅವರ 'ಹಂಸಗೀತೆ'ಯಲ್ಲಿ.